# ಲೈಟ್ನರ್ ವಿಟ್ಮರ್ (1867-1956): ನೈದಾನಿಕ ಮನೋವಿಜ್ಞಾನದ ಜನಕ

## ಇಂದಿರಾ ಜೈಪ್ರಕಾಶ್



***

ಅಮೆರಿಕೆಯ ಮನೋವಿಜ್ಞಾನಿಯಾಗಿದ್ದ ವಿಟ್ಮರ್ 'ನೈದಾನಿಕ ಮನೋವಿಜ್ಞಾನದ ಜನಕ' ಎನಿಸಿಕೊಂಡಿದ್ದಾನೆ. ನೈದಾನಿಕ ಮನೋವಿಜ್ಞಾನ ಮಾನಸಿಕ ತೊಂದರೆಗಳ ಚಿಕಿತ್ಸೆಗೆ ಸಂಬಂಧಿಸಿದ ಅನ್ವಯಿಕ ಕ್ಷೇತ್ರ. ಪ್ರಥಮ ಬಾರಿಗೆ 'ಕ್ಲಿನಿಕಲ್ ಸೈಕಾಲಜಿ (Clinical Psychology)' ಎಂಬ ಪದ ಬಳಸಿದವನು, 1896 ರಲ್ಲಿ ಮನೋರೋಗಗಳ ಚಿಕಿತ್ಸೆಗೆ ಪ್ರಪ್ರಥಮ 'ಕ್ಲಿನಿಕ್' ಸ್ಥಾಪಿಸಿದವನು, ಪ್ರಥಮ ಕ್ಲಿನಿಕಲ್ ತರಬೇತಿ ಕಾರ್ಯಕ್ರಮ ಪ್ರಾರಂಭಿಸಿದವನು, ದಿ ಸೈಕಲಾಜಿಕಲ್ ಕ್ಲಿನಿಕ್ (The Psychological Clinic) ಎಂಬ ವಿದ್ವತ್ ಪತ್ರಿಕೆ ಪ್ರಕಟಿಸಿದವನು, ಕ್ಲಿನಿಕಲ್ ವಿಧಾನಗಳನ್ನು ಕಂಡು ಹಿಡಿದು ವಿವರಿಸಿದವನು, ಮನೋವಿಜ್ಞಾನ ಮಾನವ ಸಮಸ್ಯೆಗಳಿಗೆ ಪರಿಹಾರ ನೀಡುವ ಕಾರ್ಯಕ್ಕೆ ಬಳಕೆಯಾಗಬೇಕು ಎಂಬ ಸಂಪ್ರದಾಯ ಬೆಳೆಸಿದವನು- ವಿಟ್ಮರ್.

ವಿಟ್ಮರ್ ಫಿಲೆಡೆಲಫಿಯಾದಲ್ಲಿ ವಿದ್ಯಾವಂತ ಕುಟುಂಬದಲ್ಲಿ ಜನಿಸಿದ, ಬಹಳ ಮೇಧಾವಿ ವಿದ್ಯಾರ್ಥಿ ಎನಿಸಿಕೊಂಡಿದ್ದ. ಪೆನಿಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಓದಿದವನು ಲೆಪ್ಜಿಗ್‌ನಲ್ಲಿ ವುನ್ಡಟ್ ಬಳಿ ಸಂಶೋಧನೆ ಮಾಡಿ ಡಾಕ್ಟರೇಟ್ ಪದವಿ ಪಡೆದ. ಜೇಮ್ಸ್ ಕೆಟೆಲ್ ನ ಜೊತೆ ಪ್ರಯೋಗಶಾಲೆಯಲ್ಲಿ ಕೆಲಸಮಾಡಿದ ಅನುಭವದಿಂದ ಪ್ರಯೋಗ ನಡೆಸುವ ವಿಧಿವಿಧಾನಗಳನ್ನು ವಿವರಿಸುವ ಪುಸ್ತಕ ಹೊರತಂದ. ಪೆನಿಸಿಲ್ವೇನಿಯಾಗೆ ಹಿಂದಿರುಗಿ ಮನೋಪ್ರಯೋಗಶಾಲೆಯ ನಿರ್ದೇಶಕನಾದ. ಕೆಲಕಾಲ ಶೈಕ್ಷಣಿಕ ಸಂಸ್ಥೆಯೊಂದರಲ್ಲಿ ಕೆಲಸಮಾಡುತ್ತಿದ್ದಾಗ ಮಾತಿನ ತೊಂದರೆ ಇದ್ದ ವಿದ್ಯಾರ್ಥಿಯನ್ನು ಇವನ ಬಳಿ ಕರೆತರಲಾಯಿತು. ಈ ಬಾಲಕನ ತೊಂದರೆ ನಿವಾರಿಸುವುದರಲ್ಲಿ ಸಮರ್ಥನಾದ ವಿಟ್ಮರ್ ಮಕ್ಕಳ ಮತ್ತು ಹದಿಹರೆಯದವರ ಮನೋಸಮಸ್ಯೆಗಳ ಚಿಕಿತ್ಸೆಗೆ 'ಕ್ಲಿನಿಕ್' ಸ್ಥಾಪಿಸಿದ. ತಾನು ವೈದ್ಯಕೀಯದಿಂದ 'ಕ್ಲಿನಿಕಲ್' ಎಂಬ ಪದ ಎರವಲು ಪಡೆದಿದ್ದರೂ ಮಕ್ಕಳ ಸಮಸ್ಯೆಗೆ ಮನೋ-ಸಾಮಾಜಿಕ (Psycho-social) ಕಾರಣಗಳಿರುತ್ತವೆ ಎಂದು ಸ್ಪಷ್ಟಪಡಿಸಿದ್ದ. ವಿಟ್ಮರ್ ಮಕ್ಕಳ ಭಾಷಾ ಸಮಸ್ಯೆ, ನಿದ್ರೆಯ ಸಮಸ್ಯೆ, ಅಪಸಾಮಾನ್ಯ ವರ್ತನೆ, ಶಾಲೆಗೆ ಹೋಗಲು ನಿರಾಕರಣೆ, ಅತಿಚಟುವಟಿಕೆ ಮುಂತಾದ ತೊಂದರೆಗಳಿಗೆ ಸೂಕ್ತ ಚಿಕಿತ್ಸೆ ನೀಡುವಲ್ಲಿ ಸಫಲನಾದ. ಹೀಗೆ ಇವನ ದವಾಖಾನೆಯಲ್ಲಿ ನೈದಾನಿಕ ಮನೋವಿಜ್ಞಾನ (Clinical Psychology) ದ ಉಗಮವಾಯಿತು.

ತನ್ನ ಈ ಹೊಸ ಕ್ಷೇತ್ರಕ್ಕೆ ನಾಲ್ಕು ಮುಖ್ಯ ಉದ್ದೇಶಗಳನ್ನು ವಿಟ್ಮರ್ ಗುರುತಿಸಿದ. ಅದು ಸಂಖ್ಯಾತ್ಮಕ ಮತ್ತು ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಭೌದ್ಧಿಕ, ನೈತಿಕ ಕೊರತೆಯನ್ನು ಪರೀಕ್ಷಿಸಬೇಕು; ಮಕ್ಕಳ ಶೈಕ್ಷಣಿಕ ಪ್ರಗತಿಗೆ ಅಡ್ಡವಾಗುವ ಮಾನಸಿಕ, ದೈಹಿಕ ನ್ಯೂನತೆಗಳನ್ನು ಸರಿಪಡಿಸಲು ವಿಶೇಷವಾದ ಮನೋಚಿಕಿತ್ಸಾ ಕೇಂದ್ರಗಳ ಸ್ಥಾಪನೆಯಾಗಬೇಕು; ವೈದ್ಯಕೀಯ, ಶಿಕ್ಷಣ, ಸಮಾಜಕಾರ್ಯ ಮುಂತಾದ ಕ್ಷೇತ್ರದಲ್ಲಿ ಕೆಲಸಮಾಡುವವರಿಗೆ ಸಾಮಾನ್ಯ ಮತ್ತು ಅಪಸಾಮಾನ್ಯ ಮಕ್ಕಳನ್ನು ಅವಲೋಕಿಸಲು ಮತ್ತು ಅವರ ಜೊತೆ ಕೆಲಸಮಾಡಲು ಅವಕಾಶ ಕಲ್ಪಿಸಬೇಕು; ಮತ್ತು ಮನೋವಿಜ್ಞಾನಿಗಳನ್ನು ತೊಂದರೆ ಇರುವ ಮಕ್ಕಳ ಜೊತೆ ಕೆಲಸಮಾಡಲು ಪರಿಣಿತರಾಗಲು ತರಬೇತಿ ನೀಡಬೇಕು. ನೈದಾನಿಕ ಮನೋವಿಜ್ಞಾನಕ್ಕೆ ಏನಾದರೂ ಬೆಲೆ ಬರಬೇಕೆಂದರೆ ಅದು ಜನರ ಮಾನಸಿಕ ಆರೋಗ್ಯ ಮತ್ತು ಸುಸ್ಥಿತಿಯನ್ನು ಉತ್ತಮಗೊಳಿಸಬೇಕು. ಹೀಗೆ ಮನೋವಿಜ್ಞಾನದ ಸಿದ್ಧಾಂತಗಳು, ವಿಧಾನಗಳನ್ನು ರೋಗನಿದಾನ ಮತ್ತು ಚಿಕಿತ್ಸೆ (Diagnosis and treatment) ಗೆ ಬಳಸುವ ಪ್ರಥಮ ಕ್ಷೇತ್ರವಾಗಿದ್ದು ಇದಕ್ಕೆ ಸೂಕ್ತವಾದ ಸಮಸ್ಯಾ- ಕೇಂದ್ರಿತ ಉಪಯುಕ್ತ ವಿಧಾನಗಳನ್ನು ವಿಟ್ಮರ್ ಪರಿಚಯಿಸಿದ. ಸಮಸ್ಯೆಗಳಿಗೆ ವ್ಯಕ್ತಿ ಇರುವ ಪರಿಸರವೂ ಕಾರಣವಾಗುವುದರಿಂದ ಅದನ್ನೂ ಸರಿಪಡಿಸುವುದು ಚಿಕಿತ್ಸೆಯ ಭಾಗವಾಗುತ್ತದೆ ಎಂದು ತಿಳಿದಿದ್ದ.

ವಿಟ್ಮರ್ ಮಾನಸಿಕ, ದೈಹಿಕ ನ್ಯೂನತೆಯಿರುವ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿದ. ಶಾಲಾ ಮನೋವಿಜ್ಞಾನ ಮತ್ತು ವಿಶೇಷ ಅಗತ್ಯವಿರುವ ಮಕ್ಕಳಿಗೆ ವಿಶೇಷ ಶಿಕ್ಷಣಕ್ಕೆ ಪ್ರೋತ್ಸಾಹ ದೊರೆಯಿತು. ವಿಟ್ಮರನ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಿದ ಅನ್ನಾ ಮಕ್ಯಾಗ್ ಅಮೆರಿಕೆಯಲ್ಲಿ ಡಾಕ್ಟರೇಟ್ ಪಡೆದ ಪ್ರಥಮ ಮಹಿಳೆಯರಲ್ಲಿ ಒಬ್ಬಳು. ಇವನ ಶಿಷ್ಯ ಟ್ವಿಟ್‌ಮೈಯರ್‌ನ ಸಂಶೋಧನೆ ಮುಂದೆ ನರವಿಜ್ಞಾನ ಕ್ಷೇತ್ರದಲ್ಲಿ ಬಳಕೆಯಾಯಿತು. ಇನ್ನೊಬ್ಬ ಶಿಷ್ಯ ಮಾರಿಸ್ ವಿಟೆಲೆಸ್ ವೃತ್ತಿಮಾರ್ಗದರ್ಶನ ಪ್ರಾರಂಭಿಸಿ ಮುಂದೆ ಔದ್ಯೋಗಿಕ ಮನೋವಿಜ್ಞಾನಕ್ಕೆ ಅಡಿಪಾಯ ಹಾಕಿದನು. 1904 ರಲ್ಲಿ ಎಡ್ವರ್ಡ್ ಟಿಟ್ಚನ್ರ್ ಸಹಕಾರದಿಂದ ತತ್ವಶಾಸ್ತ್ರದ ಸಂಸ್ಥೆಗಳ ಅಂಗವಾಗಿದ್ದ ಮನೋವಿಜ್ಞಾನದ ಸಂಸ್ಥೆಗಳನ್ನು ಬೇರ್ಪಡಿಸಿ ಪ್ರಾಯೋಗಿಕ ಮನೋವಿಜ್ಞಾನ ಸಂಸ್ಥೆ ರೂಪಿಸಿದನು.

ಅಮೆರಿಕೆಯ ಸಿವಿಲ್ ಯುದ್ಧದಿಂದ ಉಂಟಾದ ಸಮಸ್ಯೆಗಳನ್ನು ಹದಿಹರೆಯದಲ್ಲಿ ನೋಡಿದ್ದ ವಿಟ್ಮರ್‌ಗೆ ಉತ್ತಮ ಭವಿಷ್ಯವಿರುವ ಉತ್ತಮ ಸಮಾಜ ನಿರ್ಮಿಸುವ ಕನಸಿತ್ತಂತೆ. ಮುಂದೆ ರೆಡ್‌ಕ್ರಾಸ್‌ನ (Red cross) ಜೊತೆಗೂಡಿ ಯುದ್ಧದಲ್ಲಿ ನಿರಾಶ್ರಿತರಾದವರ ಪುನರ್ವಸತಿ (rehabilitation) ಕಾರ್ಯದಲ್ಲಿ ಸಹಾಯಮಾಡಿದ್ದನು. ಒಂದು ಪುಟ್ಟ ಖಾಸಗಿ ವಸತಿಶಾಲೆ ಸ್ಥಾಪಿಸಿ ಬುದ್ಧಿಮಾಂದ್ಯ ಮತ್ತು ತೊಂದರೆಗೊಳಗಾದ ಮಕ್ಕಳ ಶುಶ್ರೂಷೆಗೆ ವ್ಯವಸ್ಥೆ ಮಾಡಿದ್ದ. ಮೊದಮೊದಲು ಮಹಿಳೆಯರನ್ನು ತನ್ನ ಸಂಸ್ಥೆಗೆ ಸೇರಿಸಿಕೊಳ್ಳಲು ಹಿಂಜರಿಯುತ್ತಿದ್ದವನು ತನ್ನ ಅಭಿಪ್ರಾಯ ಬದಲಿಸಿ ಮಹಿಳೆಯರನ್ನು ಚಿಕಿತ್ಸಾಲಯದ ನಿರ್ವಹಣೆಗೆ ನೇಮಿಸಿದ್ದನಂತೆ. ಇವನ ಪತ್ನಿ ಅನ್ನಾ ರಫ್ಲಿಯರ್ ಉನ್ನತ ಶಿಕ್ಷಣ ಪಡೆದವಳಾಗಿದ್ದು ಬರಹಗಾರ್ತಿಯೂ ಆಗಿದ್ದಳು. ತನ್ನ 89 ನೆಯ ವಯಸ್ಸಿನಲ್ಲಿ ಮರಣ ಹೊಂದಿದ ವಿಟ್ಮರನ ಗೌರವಾರ್ಥ ಪೆನಿಸಿಲ್ವೇನಿಯಾ ವಿಶ್ವವಿದ್ಯಾಲಯ ನೈದಾನಿಕ ಮನೋವಿಜ್ಞಾನದ ವಿಶೇಷ ಹೊತ್ತಿಗೆಯೊಂದನ್ನು ಹೊರತಂದಿತ್ತು.

***